

## ಮರೆಯಾದ ‘ಉಳುಕ’

ಇಂದಿನ ಆಧುನಿಕ ಯುಗದಲ್ಲಿ ಅನೇಕ ಪುರಾತನ ಪರಿಕರಗಳು ಕಣ್ಮರೆಯಾಗುತ್ತಿವೆ. ಅದರಲ್ಲಿ ಈ ಉಳುಕವೂ ಒಂದು. ರೈತನು ರಾಶಿ ಮಾಡುತ್ತಿರುವ ಸಂದರ್ಭದಲ್ಲಿ 4–5 ಟನ್ ಭಾರದ ಈ ಉಳುಕವನ್ನು ಎತ್ತುಗಳಿಗೆ ಕಟ್ಟಿ 8–10 ಸಾರಿ ಧಾನ್ಯಗಳ ಮೇಲೆ ಉರುಳಿಸಿ ರಾಶಿ ಮಾಡುತ್ತಿದ್ದನು. ಆದರೆ ಈಗ ರಾಶಿ ಮಾಡಲು ಯಂತ್ರಕ್ಕೆ ಮೊರೆ ಹೋಗಿರುವುದರಿಂದ ಸಾಂಪ್ರದಾಯಿಕ ರಾಶಿ ಪದ್ಧತಿ ಬಿಟ್ಟಿದ್ದಾರೆ. ಯಂತ್ರದಿಂದ ರಾಶಿಯು ಬೇಗನೇ ಆಗಿ ಮಳೆಗೆ ಸಿಲುಕುವುದೂ ತಪ್ಪುತ್ತದೆ. ಆದ್ದರಿಂದಲೇ ಉಳುಕ ಕೈಬಿಟ್ಟಿರಬಹುದು.

**–ಶ್ರೀಶೈಲ ಎಸ್. ಅಂಗಡಿ, ಬೆಳಗಾವಿ**

## ಎರಡು ಅಡಿ ಉದ್ದದ ಪಪ್ಪಾಯ

ಇಲ್ಲಿರುವ ಚಿತ್ರ ಕುಮಟಾ ಬೀದಿ ಬದಿಯ ವ್ಯಾಪಾರಿಯೊಬ್ಬರು ಮಾರಾಟಕ್ಕೆ ತಂದ ಪಪ್ಪಾಯ. ಕುಮಟಾ ಬಳಿಯ ಹೆಗಡೆ ಗ್ರಾಮದಲ್ಲಿ ಬೆಳೆಯುವ ಪಪ್ಪಾಯದ ಹಣ್ಣಿದು. 2 ಅಡಿ ಉದ್ದದವರೆಗೂ ಬೆಳೆಯುತ್ತದೆ. ಸ್ಥಳೀಯ ಜಾತಿಯ ಈ ಪಪ್ಪಾಯ ಬಹಳ ಅಪರೂಪದ ಕೆನೆ ಬಣ್ಣ ಹೊಂದಿದೆ.

**–ಕೆ.ಜೆ.ಜ್ಯೋತಿಪ್ರಭಾ, ಕುಮಟ**







## ಮೂಲ ಕಲ್ಲಿನ ರಥ

ಹಂಪಿಯಲ್ಲಿ ವಾಸ್ತು ಶಿಲ್ಪದ ಶೈಲಿ ಅದ್ಭುತ ಕಲಾವಂತಿಕೆಗೆ ಸಾಕ್ಷಿಯಾಗಿದ್ದು, ಅದರಲ್ಲಿ ಪ್ರವಾಸಿಗರ ಮನದಲ್ಲಿ ಅಚ್ಚೊತ್ತುವುದು ಕಲ್ಲಿನ ರಥ . 1868ರಲ್ಲಿ ಬ್ರಿಟಿಷ್ ಅಧಿಕಾರಿ ಎಡ್ಮಂಡ್ ಡೇವಿಡ್ ಲೀಯಾನ್ ತೆಗೆದ ಛಾಯಚಿತ್ರ ರಥದ ವಾಸ್ತವ ಸ್ವರೂಪ ಬಿಚ್ಚಿಟ್ಟಿದೆ. ಕಲ್ಲಿನ ನಾಲ್ಕು ಗಾಲಿಪೀಠದ ಮೇಲಿರುವ ರಥಕ್ಕೆ ಸುಂದರವಾದ ಶಿಖರ ನಿರ್ಮಿಸಲಾಗಿತ್ತು. ಅದರ ಸೌಂದರ್ಯ ಆಗ ಇನ್ನೂ ಅದ್ಭುತವಾಗಿ ಕಾಣುತ್ತಿತ್ತು. ನಂತರ ಮೇಲಿನ ಸುಂದರ ಶಿಖರ ಜೀರ್ಣವಾಗಿದೆ.

**–ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ**